ಮೈಸೂರ್ ಡಿಸ್ಟ್ರಿಕ್ಟ್.

ತಾರೀಖು 6ನೇ ಜುಲೈ 1896.

1896ನೇ ಇಸವಿ ಮಾರ್ಚಿ 15ರ ಲಾಗಾಯತು ಗ್ರಾಮದಿಂದ ಗೈರ್ ಹಾಜರಾಗಿರುವ ಮಾಳಿಗೆ ಎಂಬುವನ ಚಹರೇ ಪಟ್ಟಿ,—

ಹೆಸರು—ಮಾಳಿಗೆ

ತಂದೆ ಹೆಸರು—ಕಾಳಮನ್ನೇ ಗವುಡ

ವಯಸ್ಸು—40 ಮತ್ತು 50 ವರುಷಕ್ಕೆ ಮಧ್ಯೆ

ಜಾತಿ—ಹಾಲುಕುರುಬ

ವಾಸಸ್ಥಳ—ಯಡತೊರೇ ತಾಲ್ಲೂಕು ಹರದನಹಳ್ಳಿ ಹೋಬಳಿ ಚಿಕ್ಕನಾಯ್ಕನಹಳ್ಳಿ ಕೊಪ್ಪಲ್

ಗುರ್ತು ಕಂಡು ಹಿಡಿಯುವ ಭಾವಗಳ ತಪಶೀಲ್ ವಿಶೇಷವಿಲ್ಲ ಇಧಾನೆ, ತಲೆ ಮೇಲಿನ ಕೂದಲು ಸ್ವಲ್ಪ ಬಳ್ಳಿಗೆ ಇದೆ. ಇವನನ್ನು ಕೊನೇಲಿ ಕಂಡಾಗ ಇವನು ಬೂದಿಬಣ್ಣದ ಕಂಬಳಿಯನ್ನು ಸಾಧಾರಣ ಪಂಚೆಯನ್ನು ಹೊದ್ದುಕೊಂಡು ಇದ್ದ. ತಲೆಗೆ ಬಿಳಿ ಬಟ್ಟೆ ಸುತ್ತಿಕೊಂಡು ಇದ್ದ.

ಇವನು ಇರುವ ಸಳ ಮುಂತಾದ್ದರ ಇನ್‌ಫರ್ಮೇಷ್ಯನೆ ವರ್ತಮಾನಗಳನ್ನ ಯಡತೊರೇ ತಾಲ್ಲೂಕು ಪೋಲೀಸ್ ಇನ್‌ಸ್ಪೆಕ್ಟರವರಿಗಾಗಲಿ ಅಥವಾ ಅಮಲ್‌ದಾರ್‌ರವರಿಗಾಗಲಿ ಕೊಡಬೇಕಾಗಿ ಕೋರಿ ಇದೆ.

ನಂಜನಗೂಡು ತಾಲ್ಲೂಕು 1895—96ನೇ ಇಸವಿ 8—59ನೇ ನಂಬರು ಹೊಸಕೋಟೆ ಜನ್ನಬಸವನ ಖೂನೀ ಮೊಕದ್ದಮ್ಮಾಕ್ಕೆ ಸಂಬಂಧಪಟ್ಟ ನಂಜನಗೂಡು ತಾಲ್ಲೂಕು ಪೋಲೀಸಿನವರಿಂದ ಅಪೇಕ್ಷಿತನಾಗಿ ಹಾಲಿ ತಪ್ಪಿಸಿಕೊಂಡು ಇರುವ ಬಲಗೈ ರಂಗ ಯಂಬುವನ ಚಹರೇ ಪಟ್ಟಿ,—

ಹೆಸರು	..	ರಂಗ
ತಂದೆ ಹೆಸರು	..	ದೊಡ್ಡ ರಂಗ
ಜಾತಿ	..	ಬಲಗೈ
ವಯಸ್ಸು	..	ಸುಮಾರು 36 ವರುಷ
ಎತ್ತರ	..	ಅಡಿ 5—5½ ಅಥವಾ 6 ಅಂಗುಲ
ಕಸಬು	..	ಆರಂಭ ಮತ್ತು ಜೀತಗಾರ
ಬಣ್ಣ		ಕಪ್ಪು

ಗುರ್ತು ಕಂಡು ಹಿಡಿಯುವದಕ್ಕೆ ವಿಶೇಷವಾದ ಭಾವಗಳ ತಪಶೀಲು.

ನೀಳು ಮುಖ, ಎಡದತೋಳು ಬಳಭಾಗದಲ್ಲಿ 2 ಅಂಗುಲ ಉದ್ದಕ್ಕೆ ½ ಅಂಗುಲ ಅಗಲಕ್ಕೆ ಕಾವಾಲೆಗೋಸ್ಕರ ಬರೆ ಹಾಕಿದ ಗುರ್ತು ಯಿದೆ. ಮಿಸೆ ಬಿಟ್ಟು ಇಧಾನೆ ಇವನನ್ನು ಕೊನೇಲಿ ಕಂಡ ವ್ಯಾಳೆ ಇವನು ಹೊಲೆ ಮಗ್ಗದ ಪಂಚೆ ಉಟ್ಟುಕೊಂಡು ಇದ್ದನು. ಮೇಲ್ಕಡೆ ಬಿಳೀದಟ್ಟಿ ಸುತ್ತಿಕೊಂಡು ಇದ್ದ. ಕರೀ ಕಂಬಳಿ ಹೊದ್ದುಕೊಂಡು ಇದ್ದ.

ಈ ಮನುಷ್ಯನು ಇರುವ ಜಾಗಾ ಮುಂತಾದ್ದರ ಇನ್‌ಫರ್ಮೇಷ್ಯನೆ ವರ್ತಮಾನವನ್ನ ನಂಜನಗೂಡು ತಾಲ್ಲೂಕು ಪೋಲೀಸ್ ಇನ್‌ಸ್ಪೆಕ್ಟರಿಗಾಗಲಿ ಅಥವಾ ಅಮಲ್ದಾರ್‌ರವರಿಗಾಗಲಿ ಕೊಡಬೇಕಾಗಿ ಕೋರಿಯಿದೆ.

ಸಿ. ಹಾರ್ಡಿ,
ಮೈಸೂರ್ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಟೆಂಡೆಂಟ್ ಸಾಹೆಬರವರು.

ಸಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ನೋಟಿಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟು.

1895—96ನೇ ಇಸವಿ ಪೊರಿಜಿನಲ್ ನಂಬರ 14.

ವಾದಿಗಳು.		ಪ್ರತಿವಾದಿ.
ಮೈಸೂರು ತೀನೆ ಲಿಂಗಾಯತ್ ವೀರಶೈವ ಬ್ರಾಹ್ಮರುಗಳಾದ	11ನೇ ಜೆನ್ನಬಸವಪ್ಪ.	ಬೆಂಗಳೂರಿನಲ್ಲಿ ಇರುವ ಮೈಸೂರು ಗವರ್ನಮೆಂಟ್ ಜನರಲ್ ಸೆಕ್ರಟರಿಯು ವರಾದ ಮಿಸ್ಟರ್ ವಿ. ಆರ್. ನರಸುಬ್ಬಯ್ಯಂಗಾರ್‌ರವರು.
1ನೇ ವೀರಸಂಗಪ್ಪ.	12ನೇ ಕೆದ್ದರವಣ್ಣ.	
2ನೇ ಎಸ್. ಆರ್. ಕರಿಬಸವಶಾಸ್ತ್ರಿ.	13ನೇ ಬಸವಲಿಂಗಪ್ಪ.	
3ನೇ ಚಿಕ್ಕ ಶಿವಲಿಂಗಸ್ವಾಮಿ.	14ನೇ ಮುದ್ದಪ್ಪ	
4ನೇ ಹುಚ್ಚಪ್ಪ.	15ನೇ ಗಂಗಶೆಟ್ಟಿ.	
5ನೇ ವಿರುಪಾಕ್ಷಪ್ಪ.	16ನೇ ಜೆನ್ನಶೆಟ್ಟಿ.	
6ನೇ ಶಾಂತವೀರಪ್ಪ.	17ನೇ ವೀರಭದ್ರಯ್ಯ.	
7ನೇ ಗುರುವಣ್ಣ.	18ನೇ ಪಿ. ರಾಜಣ್ಣ.	
8ನೇ ಹುಚ್ಚವೀರಪ್ಪ.	19ನೇ ಪುಟ್ಟಣ್ಣ.	
9ನೇ ಯಜಮಾನ ಪುಟ್ಟಣ್ಣ.	20ನೇ ವಿಶ್ವಕಂಠಯ್ಯ.	
10ನೇ ಗುಬ್ಬಣ್ಣ.	21ನೇ ಗುರುಶಾಂತಪ್ಪ.	

ಈ ಮೊಕದ್ದಮಾ ವಾದಿಗಳು ಮೇಲ್ಕಂಡ ಪ್ರತಿವಾದೀರ ಮೇಲೆ ಲುಕ್ಸಾನಿಗೂ ಮತ್ತು ಮಾನನಷ್ಟಕ್ಕೂ ಈ ಕೋರ್ಟಿನಲ್ಲಿ ಮಾಡಿರುವ ದಾವಾ 1896ನೇ ಇಸವಿ ಜುಲೈ 28ನೇ ತಾರೀಖಿಗೆ ಇಷ್ಯೂ ಹಿಯರಿಂಗ್ ಬಗ್ಯೆ ಇಟ್ಟು ಇರುತ್ತೆಂದು ಇದರಿಂದ ತಿಳಿಯಪಡಿಸಿ ಇದೆ.

ದಾವಾ ಅರ್ಜಿ ಮತ್ತು ಷೆಡ್ಯೂಲ್ ಇದರ ಕೂಡ ಫಾಯಿಷ್ ಮಾಡಿ ಇರುತ್ತೆ.

ಬತಾರೀಖು 24ನೇ ಮಾರ್ಚಿ 1896ನೇ ಇಸವಿ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.